ಓ.ಎಸ್.ನಂಃ 5/2021
ಡಿ.ಡಬ್ಲ್ಯೂಃ 1

<u>ದಿನಾಂಕಃ 27-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-</u>

ಶೇಖ್ ಮೋಹಿದ್ದಿನ್ ಸಾಬ್ ಎಂದರೆ ನನ್ನ ಅಜ್ಜ ಇರುತ್ತಾರೆ. ದಾವಾ ಆಸ್ತಿಗಳು ಹಿಂದೆ ನನ್ನ ಅಜ್ಜನಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಶೇಖ್ ಮಹಮ್ಮದ್ ಗೌಸ್ ಎಂದು ಇರುತ್ತದೆ. ಅಂದಾಜು 1960 ನೇ ಇಸವಿಗಿಂತಾ ಪೂರ್ವದಲ್ಲಿಯೇ ನನ್ನ ತಂದೆ ಶೇಖ್ ಮಹಮ್ಮದ್ ಗೌಸ್ ರವರಿಗೆ ದಾವಾ ಆಸ್ತಿಗಳು ದರ್ಕಾಸ್ತ್ ನಲ್ಲಿ ಬಂದಿರುತ್ತದೆ. ಈ ಬಗ್ಗೆ ದಾಖಲೆಗಳು ನನ್ನಲ್ಲಿ ಇರುತ್ತದೆ. ಆ ಪೈಕಿ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನನ್ನ ಅಜ್ಜ 1948 ರಲ್ಲಿ ತೀರಿ ಹೋಗಿರುತ್ತಾರೆ. ನನ್ನ ತಂದೆಯವರು 2012-13 ರಲ್ಲಿ ತೀರಿ ಹೋಗಿರುತ್ತಾರೆ. ಆಗ ನನ್ನ ತಂದೆಯವರಿಗೆ ಸುಮಾರು 83-84 ವಯಸ್ಸು ಆಗಿದ್ದಿರಬಹುದು. 2007 ನೇ ಇಸವಿಯಲ್ಲಿ ನನ್ನ ತಂದೆಗೆ ಸುಮಾರು 78 ವರ್ಷ ಇರಬಹುದು. 2007 ನೇ ಇಸವಿಯಲ್ಲಿ ನನ್ನ ತಂದೆಯವರು ಓಡಾಡುತ್ತಿದ್ದರು ಆದರೆ ಕೆಲಸ ಮಾಡುತ್ತಿರಲಿಲ್ಲ. ಸದರಿ 2007 ನೇ ಇಸವಿಯಲ್ಲಿ ನನ್ನ ತಂದೆಯವರು ಓಡಾಡುತ್ತಿರಲಿಲ್ಲ ಹಾಗೂ ಬೆಡ್ ರಿಡನ್ ಆಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-3 2007 ನೇ ಇಸವಿಯಲ್ಲಿ ಮಾಡಿಕೊಂಡ ಪಾಲುವಿಭಾಗ ಪತ್ರ ನನ್ನ ತಂದೆಯ ಇಚ್ಚೆಯಂತೆ ಆಗಿರುವ ಪತ್ರ ಇರುತ್ತದೆ. ಸದರಿ ಪಾಲುವಿಭಾಗ ಪತ್ರವು ನಮ್ಮ ಇಚ್ಚೆಯಂತೆ ನಾವು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗ ಪತ್ರದಲ್ಲಿ

ನಾವು ದೊಡ್ಡ ಪಾಲನ್ನು ಇಟ್ಟುಕೊಂಡು, ಹೆಣ್ಣು ಮಕ್ಕಳಿಗೆ ಹಾಗೂ ನನ್ನ ತಂದೆಯವರಿಗೆ ಯಾವುದೇ ಸರಿಯಾದ ಪಾಲನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗದಲ್ಲಿ ನಮಗೆ ಹೆಚ್ಚಿನ ಪಾಲು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳ ಪೈಕಿ ಒಳ್ಳೆಯ ಆಸ್ತಿಯನ್ನು ನಾವು ಇಟ್ಟುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿಪಿ-3 ರಲ್ಲಿ ಒಳ್ಳೆಯ ಆಸ್ತಿಯನ್ನು ತಂದೆಗೆ ಹಾಗೂ ಹೆಣ್ಣು ಮಕ್ಕಳಿಗೆ ನೀಡಿರುತ್ತೇವೆ ಎಂದು ಬರೆಸಿರುವುದಿಲ್ಲ.

(ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

ಓ.ಎಸ್.ನಂಃ 5/2021
ಡಿ.ಡಬ್ಲ್ಯೂಃ 1